KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – III | ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೭, ೨೦೧೧ (ಭಾದ್ರಪದ ೧೬, ಶಕ ವರ್ಷ ೧೯೩೩) | ನಂ. ೬೨೬ |
|---|---|---|

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ :– ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ.

ಓದಲಾಗಿದೆ:– 1. ರಾಜ್ಯ ಚುನಾವಣಾ ಆಯೋಗದ ಸಂಖ್ಯೆ : ರಾಚುಆ.155.ಇಜಿಪಿ.2010 ದಿನಾಂಕ: 14–05–2010.

2. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ.ರಾಚುಆ.155.ಇಜಿಪಿ.2010, ಬೆಂಗಳೂರು, ದಿನಾಂಕ: 17–05–2010.

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ/03/ಶಾಸನ/2010, ಬೆಂಗಳೂರು, ದಿನಾಂಕ: 23–07–2010.

4. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ/40/ಶಾಸನ/2010, ಬೆಂಗಳೂರು, ದಿನಾಂಕ: 16–07–2011.

–:–:–:–

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆಯೋಗದ ಆದೇಶದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 44(2) ರ ಪ್ರಕಾರ ಜಿಲ್ಲಾಧಿಕಾರಿಗಳು ರಾಜ್ಯ ಚುನಾವಣಾ ಆಯೋಗದ ಸಾಮಾನ್ಯ ಹಾಗೂ ವಿಶೇಷ ಆದೇಶಕ್ಕೆ ಒಳಪಟ್ಟು ಗ್ರಾಮ ಪಂಚಾಯತಿಗಳಿಗೆ ಅಧ್ಯಕ್ಷ ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ನಿಗದಿಪಡಿಸಲು ಆದೇಶಿಸಿದೆ.

2) ಅದರಂತೆ ಮೇಲೆ ಓದಲಾದ (2) ರ ಆದೇಶದಲ್ಲಿ ರಾಜ್ಯ ಚುನಾವಣಾ ಆಯೋಗವು ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ವರ್ಗವಾರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಸಂಖ್ಯೆಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿರುವಂತೆ ಸದರಿ ಆದೇಶದ ಅನುಬಂಧದಲ್ಲಿ ತಾಲ್ಲೂಕುವಾರು ವರ್ಗವಾರು ನಿಗದಿಪಡಿಸಲಾಗಿರುವ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಸಂಖ್ಯೆಗಳನ್ನು ಆಯಾ ತಾಲ್ಲೂಕಿನ ಗ್ರಾಮ ಪಂಚಾಯತಿಗಳಿಗೆ ಜಿಲ್ಲಾಧಿಕಾರಿಗಳು ಮೊದಲ 30 ತಿಂಗಳ ಅವಧಿಗೆ ಮೀಸಲಿರಿಸಿ ಚುನಾವಣೆ ನಡೆಸಿರುತ್ತಾರೆ. ಈಗ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸಬೇಕಾಗಿರುತ್ತದೆ.

3) ಪ್ರಸ್ತುತ ಮೇಲೆ ಓದಲಾದ (3) ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ/03/ಶಾಸನ/2010, ಬೆಂಗಳೂರು ದಿನಾಂಕ: 23–07–2010 ರಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ

44(2)(ಸಿ) ಗೆ ತಿದ್ದುಪಡಿ ತಂದು ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗ ಹೀಗೆ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು (1/3 ರಷ್ಟು) ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡುವ ಬದಲು ಶೇಕಡ 50 ಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು ಎಂದು ಜಾರಿಗೆ ಬಂದಿರುತ್ತದೆ.

4) ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 356/1994 ರಲ್ಲಿ ದಿನಾಂಕ: 11-05-2010 ರಂದು ನೀಡಿರುವ ತೀರ್ಪಿನಂತೆ ಸರ್ಕಾರವು ಮೇಲೆ ಓದಲಾದ (4) ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ/40/ ಶಾಸನ/2010, ಬೆಂಗಳೂರು ದಿನಾಂಕ: 16-07-2011 ರಂತೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರ 44ನೇ ಪ್ರಕರಣದ 2ನೇ ಉಪ ಪ್ರಕರಣದ (ಬಿ) ಖಂಡದ ಕೊನೆಯಲ್ಲಿ "ಆದರೆ ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ನಿರ್ಧರಿಸಿ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಒಟ್ಟು ಹುದ್ದೆಗಳ ಸಂಖ್ಯೆಯು, (ಎ) ಖಂಡದ ಅಡಿಯಲ್ಲಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಮತ್ತು ಈ ಖಂಡದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ರಾಜ್ಯದಲ್ಲಿ ಆ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡ ಐವತ್ತನ್ನು ಮೀರತಕ್ಕದ್ದಲ್ಲ" ಎಂಬುದನ್ನು ಸೇರ್ಪಡೆ ಮಾಡಿ ಜಾರಿಗೆ ಬಂದಿರುತ್ತದೆ.

5) ಮೇಲ್ಕಂಡ ತಿದ್ದುಪಡಿ ಅನುಸಾರ ಹುದ್ದೆಗಳನ್ನು ನಿಗದಿಪಡಿಸುವ ಸಂದರ್ಭದಲ್ಲಿ ಒಂದು ವೇಳೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಬೇಕಾದ ಹುದ್ದೆಗಳ ಒಟ್ಟು ಸಂಖ್ಯೆಯು ಗ್ರಾಮ ಪಂಚಾಯತಿಗಳ ಒಟ್ಟು ಹುದ್ದೆಗಳ ಸಂಖ್ಯೆಯ ಶೇಕಡ 50 ನ್ನು ಮೀರುವ ಸಂದರ್ಭದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನಿಗದಿಪಡಿಸಿದ ಹುದ್ದೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಹಿಂದುಳಿದ ವರ್ಗಕ್ಕೆ ನಿಗದಿಪಡಿಸಿದ ಹುದ್ದೆಗಳಲ್ಲಿ ಕಡಿತಗೊಳಿಸಿ ಒಟ್ಟು ಮೂರು ಪ್ರವರ್ಗದ ಹುದ್ದೆಗಳ ಸಂಖ್ಯೆಗಳನ್ನು ಶೇಕಡ 50 ಕ್ಕೆ ಮಿತಿಗೊಳಿಸಬೇಕಾಗುತ್ತದೆ.

6) ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನಲ್ಲಿ ಜಲಾಲಪುರ ಒಂದು ಗ್ರಾಮ ಪಂಚಾಯತಿ ಹೊಸದಾಗಿ ರಚನೆಯಾಗಿರುತ್ತದೆ.

7) ಈ ಮೇಲ್ಕಂಡ ಕಂಡಿಕೆ 3 ರಿಂದ 6 ರಲ್ಲಿ ವಿವರಿಸಿದ ಕಾರಣಗಳಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 44 ರ ಉಪ ಪ್ರಕರಣ (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಚುನಾವಣಾ ಆಯೋಗವು ಕಂಡಿಕೆ (6) ರಂತೆ ಹೊಸದಾಗಿ ರಚನೆಯಾದ ಒಂದು ಗ್ರಾಮ ಪಂಚಾಯತಿ ಸೇರಿಕೊಂಡಂತೆ ರಾಜ್ಯದ ಒಟ್ಟು 5628 ಗ್ರಾಮ ಪಂಚಾಯತಿಗಳಿಗೆ ತಾಲ್ಲೂಕುವಾರು ವರ್ಗವಾರು ಎರಡನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಸಂಖ್ಯೆಗಳನ್ನು ನಿರ್ದಿಷ್ಟಪಡಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 155 ಇಜಿಪಿ 2010,**

**ಬೆಂಗಳೂರು, ದಿನಾಂಕ: 05-09-2012**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 44ರ ಉಪಪ್ರಕರಣ (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಚುನಾವಣಾ ಆಯೋಗವು ಪ್ರಸ್ತುತ ರಾಜ್ಯದಲ್ಲಿ ಇರುವ 5628 ಗ್ರಾಮ ಪಂಚಾಯತಿಗಳಿಗೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ (ಅ), ಹಿಂದುಳಿದ (ಬ) ಮತ್ತು ಸಾಮಾನ್ಯ ವರ್ಗಗಳಿಗೆ ಹಾಗೂ ಈ ಪ್ರವರ್ಗಗಳಲ್ಲಿ ಮಹಿಳೆಯರಿಗೆ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿದಂತೆ ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳಿಗೆ ನಿರ್ದಿಷ್ಟಪಡಿಸಲಾಗಿದೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹುದ್ದೆಗಳನ್ನು ಆಯಾಯ ತಾಲ್ಲೂಕಿನ ಜನಸಂಖ್ಯೆಯ ಆಧಾರದ ಮೇಲೆ ನಿಗದಿಪಡಿಸಿದೆ.

2) ಆಯಾ ಜಿಲ್ಲಾಧಿಕಾರಿಗಳು ತಾಲ್ಲೂಕುವಾರು ವಿವಿಧ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಹಾಗೂ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಲಾಗಿರುವ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಈ ಕೆಳಗೆ ವಿವರಿಸಿರುವ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿಗಳಿಗೆ ನಿಗದಿಪಡಿಸತಕ್ಕದ್ದು.

3) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಗ್ರಾಮ ಪಂಚಾಯತಿಗಳಿಗೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ (ಅ) ಹಿಂದುಳಿದ ವರ್ಗ (ಬ), ಸಾಮಾನ್ಯ (ಮಹಿಳೆ) ಮತ್ತು ಸಾಮಾನ್ಯ ಈ ಕ್ರಮದಲ್ಲಿಯೇ ನಿಗದಿಪಡಿಸತಕ್ಕದ್ದು. ಅಂದರೆ ಮೊದಲು ಅನುಸೂಚಿತ ಜಾತಿ ಅಧ್ಯಕ್ಷ ಹುದ್ದೆಯನ್ನು ಪಡೆಯುವ ಗ್ರಾಮ ಪಂಚಾಯತಿಗಳನ್ನು ನಿಗದಿಪಡಿಸಿದ ನಂತರ ಅನುಸೂಚಿತ ಪಂಗಡ ಅಧ್ಯಕ್ಷ ಹುದ್ದೆ, ಹಿಂದುಳಿದ ವರ್ಗ (ಅ) ಅಧ್ಯಕ್ಷ ಹುದ್ದೆ, ಹಿಂದುಳಿದ ವರ್ಗ (ಬ) ಅಧ್ಯಕ್ಷ ಹುದ್ದೆ ಹೀಗೆ ಒಂದಾದ ನಂತರ ಒಂದನ್ನು ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯತಿಗಳಿಗೆ ನಿಗದಿಪಡಿಸತಕ್ಕದ್ದು. ಉಪಾಧ್ಯಕ್ಷರ ಹುದ್ದೆಗಳನ್ನು ನಿಗದಿಪಡಿಸುವಾಗಲೂ ಮೇಲೆ ವಿವರಿಸಿದ ಕ್ರಮವನ್ನೇ ಅನುಸರಿಸತಕ್ಕದ್ದು.

4) ಅನುಸೂಚಿತ ಜಾತಿ ಅಧ್ಯಕ್ಷ ಹುದ್ದೆಯನ್ನು ನಿಗದಿಪಡಿಸುವಾಗ ಆ ಜನಾಂಗದ ಸದಸ್ಯರುಗಳ ಸಂಖ್ಯೆ ಅತ್ಯಂತ ಹೆಚ್ಚು ಇರುವ ಗ್ರಾಮ ಪಂಚಾಯತಿಯನ್ನು ಗುರುತಿಸಿ ಆ ಗ್ರಾಮ ಪಂಚಾಯತಿಗಳಿಗೆ ಅನುಸೂಚಿತ ಜಾತಿ ಅಧ್ಯಕ್ಷರ ಹುದ್ದೆಯನ್ನು ನಿಗದಿಪಡಿಸತಕ್ಕದ್ದು. ಹೀಗೆ ಮಾಡುವಾಗ ತಾಲ್ಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಅನುಸೂಚಿತ ಜಾತಿ ಸದಸ್ಯ ಸ್ಥಾನಗಳ ಆಧಾರದ ಮೇಲೆ ಅವರೋಹ ಕ್ರಮದಲ್ಲಿ (Descending Order) ಗ್ರಾಮ ಪಂಚಾಯತಿಯನ್ನು/ ಗಳನ್ನು ಬರೆದುಕೊಂಡು ನಂತರ ನಿರ್ಧರಿಸತಕ್ಕದ್ದು. ಈ ರೀತಿ ಮಾಡುವಾಗ ಸರದಿಯಂತೆ (ರೊಟೇಷನ್) **ಅಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 44 ರ ವಿವರಣೆಯಂತೆ "ಈ ಪ್ರಕರಣದಡಿಯಲ್ಲಿ ಹುದ್ದೆಯ ಮೀಸಲಾತಿಯ ಸರದಿ ಸೂತ್ರವು 1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಪ್ರಾರಂಭವಾದ ನಂತರ ನಡೆಸುವ ಪ್ರಥಮ ಚುನಾವಣೆಯಿಂದ ಪ್ರಾರಂಭವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ". ಅದರಂತೆ** ಕ್ರಮವಹಿಸಿ ಅನುಸೂಚಿತ ಜಾತಿ ಅಧ್ಯಕ್ಷ ಹುದ್ದೆಯನ್ನು ಮೀಸಲಿರಿಸಲಾಗಿದ್ದ ಗ್ರಾಮ ಪಂಚಾಯತಿಗಳನ್ನು ಹೊರತುಪಡಿಸತಕ್ಕದ್ದು. ಅನುಸೂಚಿತ ಜಾತಿಗೆ ಮೀಸಲಿರಿಸಲಾದ ಉಪಾಧ್ಯಕ್ಷರುಗಳ ಹುದ್ದೆಯನ್ನು ನಿಗದಿಪಡಿಸುವಾಗಲೂ ಇದೇ ಕ್ರಮವನ್ನು ಅನುಸರಿಸತಕ್ಕದ್ದು. ಅನುಸೂಚಿತ ಪಂಗಡದ ಅಧ್ಯಕ್ಷ / ಉಪಾಧ್ಯಕ್ಷ ಹುದ್ದೆಗಳನ್ನು ಇದೇ ಕ್ರಮವನ್ನು ಅನುಸರಿಸಿ ಮೀಸಲಿರಿಸತಕ್ಕದ್ದು.

5) ಹಿಂದುಳಿದ ವರ್ಗ (ಅ) ಮತ್ತು ಹಿಂದುಳಿದ ವರ್ಗ (ಬ) ಪ್ರವರ್ಗಗಳಿಗೆ ಮೀಸಲಿರಿಸಲಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಈ ಪ್ರವರ್ಗದ ಅತಿ ಹೆಚ್ಚು ಸದಸ್ಯ ಸಂಖ್ಯೆಯಿರುವ ಗ್ರಾಮ ಪಂಚಾಯತಿಗಳಿಗೆ ಕಂಡಿಕೆ 4ರಲ್ಲಿ ಸೂಚಿಸಿರುವ ಕ್ರಮವನ್ನು ಅನುಸರಿಸಿ ನಿಗದಿಪಡಿಸತಕ್ಕದ್ದು.

6) ಮೀಸಲಿರಿಸಿದ ಪ್ರವರ್ಗಗಳ ಮಹಿಳಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯನ್ನು ನಿಗದಿಪಡಿಸುವಾಗ ಮೊದಲು ಆ ಪ್ರವರ್ಗಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯನ್ನು ಪಡೆಯುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ ಅವುಗಳನ್ನು ಮೀಸಲಿರಿಸಿದ ಆ ಪ್ರವರ್ಗಕ್ಕೆ ಸೇರಿದ ಮಹಿಳಾ ಸದಸ್ಯ ಸಂಖ್ಯೆಗೆ ಅನುಗುಣವಾಗಿ ಅವರೋಹ ಕ್ರಮದಲ್ಲಿ (Descending Order) ಬರೆದುಕೊಂಡು ನಂತರ ಅಂತಹ ಗ್ರಾಮ ಪಂಚಾಯತಿಗಳಲ್ಲಿ ಆ ಮಹಿಳಾ ಸದಸ್ಯ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಅತಿ ಹೆಚ್ಚು ಮಹಿಳಾ ಸದಸ್ಯರಿರುವ ಗ್ರಾಮ ಪಂಚಾಯತಿಗಳಿಗೆ ಮಹಿಳಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸತಕ್ಕದ್ದು. ಹೀಗೆ ಮಾಡುವಾಗ ಸಾಧ್ಯವಾದಷ್ಟು ಮಟ್ಟಿಗೆ ಹಿಂದಿನ ಅವಧಿಯಲ್ಲಿ ಮಹಿಳಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಪಡೆದಿದ್ದ ಗ್ರಾಮ ಪಂಚಾಯತಿಗಳನ್ನು ಹೊರತುಪಡಿಸತಕ್ಕದ್ದು.

7) ಸಾಮಾನ್ಯ (ಮಹಿಳೆ) ವರ್ಗಕ್ಕೆ ಮೀಸಲಿರಿಸಲಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಆ ವರ್ಗದ ಅತಿ ಹೆಚ್ಚು ಸದಸ್ಯ ಸಂಖ್ಯೆಯಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ ನಿಗದಿಪಡಿಸತಕ್ಕದ್ದು. ಹೀಗೆ ನಿಗದಿಪಡಿಸುವಾಗ ಸಾಧ್ಯವಾದಷ್ಟು ಮಟ್ಟಿಗೆ ಹಿಂದಿನ ಅವಧಿ / ಅವಧಿಗಳಲ್ಲಿ ಈ ವರ್ಗಕ್ಕೆ ಮೀಸಲಿರಿಸಲಾದ ಗ್ರಾಮ ಪಂಚಾಯತಿಗಳನ್ನು ಹೊರತುಪಡಿಸತಕ್ಕದ್ದು.

8) ಯಾವುದೇ ಮೀಸಲಿರಿಸಿದ ವರ್ಗದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸುವಾಗ ಒಂದು ವೇಳೆ ಸದಸ್ಯರ ಸಂಖ್ಯೆಗಳು ಸಮವಾಗಿರುವ ಗ್ರಾಮ ಪಂಚಾಯತಿಗಳು ಹಲವು ಇದ್ದು ಮೀಸಲಿರಿಸಬೇಕಾದ ಹುದ್ದೆಗಳು ಇಂತಹ ಗ್ರಾಮ ಪಂಚಾಯತಿಗಳ ಸಂಖ್ಯೆಗಿಂತ ಕಡಿಮೆಯಿದ್ದಲ್ಲಿ ಅಂತಹ ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಚುನಾಯಿತ ಸದಸ್ಯರುಗಳ ಸಮ್ಮುಖದಲ್ಲಿ **ಆದೇಶ ಸಂಖ್ಯೆ: ರಾಚುಆ.155.ಇಜಿಪಿ.2010 ದಿನಾಂಕ: 14-05-2010** ರನ್ವಯ ಜಿಲ್ಲಾಧಿಕಾರಿಗಳು ಲಾಟರಿ ಎತ್ತುವ ಮೂಲಕ ನಿಗದಿಪಡಿಸತಕ್ಕದ್ದು.

9) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸುವಾಗ ಒಂದೇ ಗ್ರಾಮ ಪಂಚಾಯತಿಯಲ್ಲಿ ಈ ಕೆಳಕಂಡ ವರ್ಗಗಳನ್ನು ಏಕ ಕಾಲದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸತಕ್ಕದ್ದಲ್ಲ.

| **ಅಧ್ಯಕ್ಷ** | **ಉಪಾಧ್ಯಕ್ಷ** |
|---|---|
| ಅನುಸೂಚಿತ ಜಾತಿ | ಅನುಸೂಚಿತ ಪಂಗಡ |
| ಅನುಸೂಚಿತ ಜಾತಿ | ಅನುಸೂಚಿತ ಜಾತಿ |
| ಅನುಸೂಚಿತ ಪಂಗಡ | ಅನುಸೂಚಿತ ಜಾತಿ |
| ಅನುಸೂಚಿತ ಪಂಗಡ | ಅನುಸೂಚಿತ ಪಂಗಡ |
| ಹಿಂದುಳಿದ ವರ್ಗ (ಎ) | ಹಿಂದುಳಿದ ವರ್ಗ (ಎ) |
| ಹಿಂದುಳಿದ ವರ್ಗ (ಬ) | ಹಿಂದುಳಿದ ವರ್ಗ (ಬ) |
| ಮಹಿಳೆ | ಮಹಿಳೆ |

10) ತಾಲ್ಲೂಕುವಾರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸುವಾಗ ಮೊದಲು ಎಲ್ಲಾ ಅಧ್ಯಕ್ಷ ಹುದ್ದೆಗಳನ್ನು ನಿಗದಿಪಡಿಸಿ ನಂತರ ಉಪಾಧ್ಯಕ್ಷ ಹುದ್ದೆಯನ್ನು ನಿಗದಿಪಡಿಸತಕ್ಕದ್ದು.

11) ಆಯೋಗವು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ 5628 ಗ್ರಾಮ ಪಂಚಾಯತಿಗಳನ್ನು ಗಣನೆಗೆ ತೆಗೆದುಕೊಂಡು ತಾಲ್ಲೂಕುವಾರು, ವರ್ಗವಾರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಸಂಖ್ಯೆಗಳನ್ನು ಅನುಬಂಧದಲ್ಲಿ ನಿಗದಿಪಡಿಸಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳನ್ನು (ಚುನಾವಣೆ ನಡೆದಿರುವ ಮತ್ತು ಅವಧಿ ಮುಗಿಯದ) ಗಣನೆಗೆ ತೆಗೆದುಕೊಂಡು ಆಯೋಗವು ವರ್ಗವಾರು ನಿಗದಿಪಡಿಸಿರುವ ಎಲ್ಲಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

12) ಈ ಆದೇಶದ ರೀತ್ಯಾ ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನಲ್ಲಿ ಹೊಸದಾಗಿ ರಚನೆಗೊಂಡ ಜಲಾಲಪುರ ಗ್ರಾಮ ಪಂಚಾಯತಿಗೆ ನಿಗದಿಪಡಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯ ಮೀಸಲಾತಿಯು ಮೊದಲನೇ ಅವಧಿಯದಾಗಿರುತ್ತದೆ.

13) ರಾಜ್ಯದಲ್ಲಿ ಇನ್ನು ಮುಂದೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ 4ರನ್ವಯ ಹೊಸದಾಗಿ ರಚಿತವಾಗುವ ಯಾವುದೇ ಗ್ರಾಮ ಪಂಚಾಯತಿಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮತಿಯನ್ನು ಪಡೆದು ನಿರ್ಧರಿಸತಕ್ಕದ್ದು.

ಆದೇಶಾನುಸಾರ

**ವೀರಭದ್ರಯ್ಯ**
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

## ಅನುಬಂಧ

(ರಾಜ್ಯ ಚುನಾವಣಾ ಆಯೋಗದ ಸಂಖ್ಯೆ: ರಾಚುಆ.155.ಇಜಿಪಿ.2010, ದಿನಾಂಕ: **05-09-2012**)

### ಗ್ರಾಮ ಪಂಚಾಯತಿಗಳ ಅಧ್ಯಕ್ಷ / ಉಪಾಧ್ಯಕ್ಷ ಹುದ್ದೆಗಳು

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಬೆಂಗಳೂರು ನಗರ | | | | | | | |
| 1 | ಬೆಂಗಳೂರು ಉತ್ತರ | 30 | 8(4) | 1(1) | 5(2) | 1(1) | 15(8) |
| 2 | ಬೆಂಗಳೂರು ದಕ್ಷಿಣ | 15 | 4(2) | 1(1) | 2(1) | - | 8(4) |
| 3 | ಬೆಂಗಳೂರು ಪೂರ್ವ | 9 | 3(2) | - | 1(1) | - | 5(3) |
| 4 | ಆನೇಕಲ್ | 32 | 12(6) | 1(1) | 2(2) | 1 | 16(8) |
| ಬೆಂಗಳೂರು (ಗ್ರಾ) | | | | | | | |
| 1 | ನೆಲಮಂಗಲ | 22 | 6(3) | 1(1) | 3(2) | 1 | 11(6) |
| 2 | ದೊಡ್ಡಬಳ್ಳಾಪುರ | 29 | 8(4) | 2(1) | 3(2) | 1 | 15(8) |
| 3 | ದೇವನಹಳ್ಳಿ | 21 | 6(3) | 2(1) | 2(1) | - | 11(6) |
| 4 | ಹೊಸಕೋಟೆ | 26 | 7(4) | 1(1) | 4(2) | 1(1) | 13(7) |
| ರಾಮನಗರ | | | | | | | |
| 1 | ಮಾಗಡಿ | 32 | 6(3) | 1(1) | 7(4) | 2(1) | 16(8) |
| 2 | ರಾಮನಗರ | 23 | 5(3) | 1(1) | 4(2) | 1(1) | 12(6) |
| 3 | ಚನ್ನಪಟ್ಟಣ | 32 | 6(3) | - | 8(4) | 2(1) | 16(8) |
| 4 | ಕನಕಪುರ | 43 | 9(5) | 1(1) | 9(5) | 2(1) | 22(11) |
| ಚಿತ್ರದುರ್ಗ | | | | | | | |
| 1 | ಮೊಳಕಾಲ್ಮೂರು | 16 | 4(2) | 7(4) | - | - | 5(3) |
| 2 | ಚಳ್ಳಕೆರೆ | 39 | 10(5) | 13(7) | - | - | 16(8) |
| 3 | ಚಿತ್ರದುರ್ಗ | 36 | 11(6) | 8(4) | - | - | 17(9) |
| 4 | ಹೊಳಲ್ಕೆರೆ | 29 | 7(4) | 3(2) | 3(2) | 1 | 15(8) |
| 5 | ಹೊಸದುರ್ಗ | 33 | 6(3) | 3(2) | 6(3) | 1(1) | 17(9) |
| 6 | ಹಿರಿಯೂರು | 32 | 9(5) | 3(2) | 3(2) | 1 | 16(8) |
| ದಾವಣಗೆರೆ | | | | | | | |
| 1 | ಹರಿಹರ | 25 | 4(2) | 3(2) | 4(2) | 1(1) | 13(7) |
| 2 | ಹರಪನಹಳ್ಳಿ | 35 | 9(5) | 6(3) | 2(1) | - | 18(9) |
| 3 | ಜಗಳೂರು | 22 | 6(3) | 6(3) | - | - | 10(5) |
| 4 | ದಾವಣಗೆರೆ | 40 | 9(5) | 5(3) | 5(2) | 1(1) | 20(10) |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 5 | ಹೊನ್ನಾಳಿ | 47 | 7(4) | 2(1) | 11(6) | 3(1) | 24(12) |
| 6 | ಚನ್ನಗಿರಿ | 61 | 11(6) | 6(3) | 10(6) | 3(1) | 31(16) |
| **ಚಿಕ್ಕಬಳ್ಳಾಪುರ** | | | | | | | |
| 1 | ಗೌರಿಬಿದನೂರು | 37 | 10(5) | 6(3) | 2(1) | - | 19(10) |
| 2 | ಚಿಕ್ಕಬಳ್ಳಾಪುರ | 22 | 6(3) | 2(1) | 2(2) | 1 | 11(6) |
| 3 | ಗುಡಿಬಂಡೆ | 7 | 2(1) | 1(1) | - | - | 4(2) |
| 4 | ಬಾಗೇಪಲ್ಲಿ | 24 | 6(3) | 4(2) | 2(1) | - | 12(6) |
| 5 | ಶಿಡ್ಲಘಟ್ಟ | 27 | 6(3) | 2(1) | 4(2) | 1(1) | 14(7) |
| 6 | ಚಿಂತಾಮಣಿ | 34 | 9(5) | 4(2) | 3(2) | 1 | 17(9) |
| **ಕೋಲಾರ** | | | | | | | |
| 1 | ಶ್ರೀನಿವಾಸಪುರ | 25 | 8(4) | 3(2) | 1(1) | - | 13(7) |
| 2 | ಕೋಲಾರ | 36 | 10(5) | 2(1) | 5(2) | 1(1) | 18(9) |
| 3 | ಮಾಲೂರು | 28 | 7(4) | 3(2) | 3(2) | 1 | 14(7) |
| 4 | ಬಂಗಾರಪೇಟೆ | 37 | 12(6) | 1(1) | 4(2) | 1(1) | 19(10) |
| 5 | ಮುಳಬಾಗಿಲು | 30 | 9(5) | 1(1) | 4(2) | 1(1) | 15(8) |
| **ಶಿವಮೊಗ್ಗ** | | | | | | | |
| 1 | ಸಾಗರ | 35 | 2(1) | - | 10(5) | 2(1) | 21(11) |
| 2 | ಸೊರಬ | 39 | 5(3) | 1(1) | 10(6) | 3(1) | 20(10) |
| 3 | ಶಿಕಾರಿಪುರ | 43 | 7(4) | 2(1) | 10(5) | 2(1) | 22(11) |
| 4 | ಹೊಸನಗರ | 29 | 2(1) | - | 8(4) | 2(1) | 17(9) |
| 5 | ತೀರ್ಥಹಳ್ಳಿ | 38 | 2(1) | - | 10(6) | 3(1) | 23(12) |
| 6 | ಶಿವಮೊಗ್ಗ | 37 | 7(4) | 2(1) | 7(4) | 2(1) | 19(10) |
| 7 | ಭದ್ರಾವತಿ | 39 | 7(4) | 1(1) | 9(5) | 2(1) | 20(10) |
| **ತುಮಕೂರು** | | | | | | | |
| 1 | ಚಿಕ್ಕನಾಯಕನಹಳ್ಳಿ | 28 | 5(3) | 2(1) | 6(3) | 1(1) | 14(7) |
| 2 | ಶಿರಾ | 36 | 9(5) | 4(2) | 4(2) | 1(1) | 18(9) |
| 3 | ಪಾವಗಡ | 33 | 10(5) | 6(3) | - | - | 17(9) |
| 4 | ಮಧುಗಿರಿ | 39 | 9(5) | 5(3) | 4(2) | 1(1) | 20(10) |
| 5 | ಕೊರಟಗೆರೆ | 23 | 5(3) | 2(1) | 3(2) | 1 | 12(6) |
| 6 | ತುಮಕೂರು | 41 | 9(5) | 3(2) | 6(3) | 2(1) | 21(11) |
| 7 | ಗುಬ್ಬಿ | 33 | 6(3) | 3(2) | 6(3) | 1(1) | 17(9) |
| 8 | ತಿಪಟೂರು | 26 | 4(2) | 1(1) | 6(3) | 2(1) | 13(7) |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 9 | ತುರುವೇಕೆರೆ | 26 | 3(2) | 1(1) | 7(4) | 2(1) | 13(7) |
| 10 | ಕುಣಿಗಲ್ | 36 | 4(2) | - | 10(5) | 2(1) | 20(10) |
| **ಚಿಕ್ಕಮಗಳೂರು** | | | | | | | |
| 1 | ಶೃಂಗೇರಿ | 9 | 1(1) | - | 2(2) | 1 | 5(3) |
| 2 | ಕೊಪ್ಪ | 22 | 3(2) | 1(1) | 6(3) | 1(1) | 11(6) |
| 3 | ನರಸಿಂಹರಾಜಪುರ | 14 | 1(1) | - | 4(2) | 1(1) | 8(4) |
| 4 | ತರೀಕೆರೆ | 46 | 7(4) | 1(1) | 12(6) | 3(2) | 23(12) |
| 5 | ಕಡೂರು | 59 | 7(4) | 1(1) | 16(8) | 4(2) | 31(16) |
| 6 | ಚಿಕ್ಕಮಗಳೂರು | 47 | 8(4) | 1(1) | 11(6) | 3(1) | 24(12) |
| 7 | ಮೂಡಿಗೆರೆ | 29 | 5(3) | 2(1) | 6(3) | 1(1) | 15(8) |
| **ದಕ್ಷಿಣಕನ್ನಡ** | | | | | | | |
| 1 | ಮಂಗಳೂರು | 49 | 3(2) | 1(1) | 13(6) | 3(2) | 29(15) |
| 2 | ಬಂಟ್ವಾಳ | 47 | 3(2) | 2(1) | 13(6) | 3(2) | 26(13) |
| 3 | ಬೆಳ್ತಂಗಡಿ | 43 | 3(2) | 2(1) | 11(6) | 3(1) | 24(12) |
| 4 | ಪುತ್ತೂರು | 37 | 4(2) | 2(1) | 10(5) | 2(1) | 19(10) |
| 5 | ಸುಳ್ಯ | 27 | 3(2) | 2(1) | 6(3) | 2(1) | 14(7) |
| **ಉಡುಪಿ** | | | | | | | |
| 1 | ಕುಂದಾಪುರ | 56 | 3(2) | 2(1) | 15(8) | 4(2) | 32(16) |
| 2 | ಉಡುಪಿ | 61 | 4(2) | 2(1) | 16(8) | 4(2) | 35(18) |
| 3 | ಕಾರ್ಕಳ | 29 | 3(2) | 2(1) | 7(4) | 2(1) | 15(8) |
| **ಹಾಸನ** | | | | | | | |
| 1 | ಸಕಲೇಶಪುರ | 26 | 6(3) | - | 6(3) | 1(1) | 13(7) |
| 2 | ಬೇಲೂರು | 37 | 8(4) | 1(1) | 7(4) | 2(1) | 19(10) |
| 3 | ಅರಸೀಕೆರೆ | 45 | 8(4) | 1(1) | 10(6) | 3(1) | 23(12) |
| 4 | ಹಾಸನ | 40 | 6(3) | - | 10(6) | 3(1) | 21(11) |
| 5 | ಆಲೂರು | 15 | 3(2) | - | 3(2) | 1 | 8(4) |
| 6 | ಅರಕಲಗೂಡು | 29 | 6(3) | - | 6(3) | 2(1) | 15(8) |
| 7 | ಹೊಳೇನರಸೀಪುರ | 26 | 4(2) | - | 7(4) | 2(1) | 13(7) |
| 8 | ಚನ್ನರಾಯಪಟ್ಟಣ | 40 | 4(2) | - | 10(6) | 3(1) | 23(12) |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| **ಕೊಡಗು** | | | | | | | |
| 1 | ಮಡಿಕೇರಿ | 22 | 2(1) | 1(1) | 6(3) | 1(1) | 12(6) |
| 2 | ಸೋಮವಾರಪೇಟೆ | 40 | 5(3) | 1(1) | 10(6) | 3(1) | 21(11) |
| 3 | ವಿರಾಜಪೇಟೆ | 36 | 3(2) | 5(3) | 8(4) | 2(1) | 18(9) |
| **ಮಂಡ್ಯ** | | | | | | | |
| 1 | ಕೃಷ್ಣರಾಜಪೇಟೆ | 34 | 4(2) | 1(1) | 9(5) | 2(1) | 18(9) |
| 2 | ನಾಗಮಂಗಲ | 27 | 3(2) | - | 7(4) | 2(1) | 15(8) |
| 3 | ಪಾಂಡವಪುರ | 24 | 3(2) | - | 6(3) | 2(1) | 13(7) |
| 4 | ಶ್ರೀರಂಗಪಟ್ಟಣ | 21 | 4(2) | - | 5(2) | 1(1) | 11(6) |
| 5 | ಮಂಡ್ಯ | 45 | 6(3) | - | 12(6) | 3(2) | 24(12) |
| 6 | ಮದ್ದೂರು | 42 | 5(3) | - | 11(6) | 3(1) | 23(12) |
| 7 | ಮಳವಳ್ಳಿ | 39 | 8(4) | - | 9(5) | 2(1) | 20(10) |
| **ಮೈಸೂರು** | | | | | | | |
| 1 | ಪಿರಿಯಾಪಟ್ಟಣ | 26 | 6(3) | 3(2) | 3(2) | 1 | 13(7) |
| 2 | ಹುಣಸೂರು | 30 | 6(3) | 6(3) | 2(2) | 1 | 15(8) |
| 3 | ಕೃಷ್ಣರಾಜನಗರ | 31 | 5(3) | 2(1) | 6(3) | 2(1) | 16(8) |
| 4 | ಮೈಸೂರು | 35 | 7(4) | 6(3) | 3(2) | 1 | 18(9) |
| 5 | ಹೆಗ್ಗಡದೇವನಕೋಟೆ | 32 | 10(5) | 8(4) | - | - | 14(7) |
| 6 | ನಂಜನಗೂಡು | 45 | 11(6) | 7(4) | 3(2) | 1 | 23(12) |
| 7 | ಟಿ.ನರಸೀಪುರ | 36 | 11(6) | 5(3) | 2(1) | - | 18(9) |
| **ಚಾಮರಾಜನಗರ** | | | | | | | |
| 1 | ಗುಂಡ್ಲುಪೇಟೆ | 30 | 6(3) | 3(2) | 5(2) | 1(1) | 15(8) |
| 2 | ಚಾಮರಾಜನಗರ | 42 | 11(6) | 4(2) | 5(2) | 1(1) | 21(11) |
| 3 | ಯಳಂದೂರು | 11 | 4(2) | 2(1) | - | - | 5(3) |
| 4 | ಕೊಳ್ಳೇಗಾಲ | 37 | 12(6) | 5(3) | 1(1) | - | 19(10) |
| **ಬೆಳಗಾಂ** | | | | | | | |
| 1 | ಚಿಕ್ಕೋಡಿ | 65 | 11(6) | 1(1) | 16(8) | 4(2) | 33(17) |
| 2 | ಅಥಣಿ | 51 | 10(5) | 2(1) | 10(6) | 3(1) | 26(13) |
| 3 | ರಾಯಬಾಗ | 34 | 9(5) | 1(1) | 6(3) | 1(1) | 17(9) |
| 4 | ಗೋಕಾಕ್ | 51 | 6(3) | 6(3) | 10(6) | 3(1) | 26(13) |
| 5 | ಹುಕ್ಕೇರಿ | 51 | 7(4) | 6(3) | 10(5) | 2(1) | 26(13) |

| ಕ್ರ. ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 6 | ಬೆಳಗಾಂ | 54 | 4(2) | 6(3) | 14(7) | 3(2) | 27(14) |
| 7 | ಖಾನಪುರ | 51 | 3(2) | 2(1) | 14(7) | 3(2) | 29(15) |
| 8 | ಬೈಲಹೊಂಗಲ | 51 | 3(2) | 5(3) | 14(7) | 3(2) | 26(13) |
| 9 | ಸವದತ್ತಿ | 43 | 4(2) | 5(3) | 10(5) | 2(1) | 22(11) |
| 10 | ರಾಮದುರ್ಗ | 35 | 4(2) | 1(1) | 10(5) | 2(1) | 18(9) |
| **ಬಿಜಾಪುರ** | | | | | | | |
| 1 | ಬಿಜಾಪುರ | 46 | 12(6) | 1(1) | 8(4) | 2(1) | 23(12) |
| 2 | ಇಂಡಿ | 44 | 10(5) | 1(1) | 9(5) | 2(1) | 22(11) |
| 3 | ಸಿಂಧಗಿ | 40 | 9(5) | 1(1) | 8(4) | 2(1) | 20(10) |
| 4 | ಬಸವನಬಾಗೇವಾಡಿ | 38 | 8(4) | 1(1) | 8(4) | 2(1) | 19(10) |
| 5 | ಮುದ್ದೇಬಿಹಾಳ್ | 31 | 6(3) | 1(1) | 6(3) | 2(1) | 16(8) |
| **ಬಾಗಲಕೋಟೆ** | | | | | | | |
| 1 | ಜಮಖಂಡಿ | 32 | 6(3) | 1(1) | 7(4) | 2(1) | 16(8) |
| 2 | ಬೀಳಗಿ | 18 | 3(2) | 2(1) | 3(2) | 1 | 9(5) |
| 3 | ಮುಧೋಳ್ | 25 | 6(3) | 2(1) | 3(2) | 1 | 13(7) |
| 4 | ಬಾದಾಮಿ | 34 | 5(3) | 4(2) | 6(3) | 2(1) | 17(9) |
| 5 | ಬಾಗಲಕೋಟೆ | 22 | 5(3) | 2(1) | 3(2) | 1 | 11(6) |
| 6 | ಹುನಗುಂದ | 30 | 6(3) | 1(1) | 6(3) | 2(1) | 15(8) |
| **ಧಾರವಾಡ** | | | | | | | |
| 1 | ಧಾರವಾಡ | 37 | 2(1) | 2(1) | 10(5) | 2(1) | 21(11) |
| 2 | ನವಲಗುಂದ | 22 | 1(1) | 1(1) | 6(3) | 1(1) | 13(7) |
| 3 | ಹುಬ್ಬಳ್ಳಿ | 19 | 1(1) | 1(1) | 5(2) | 1(1) | 11(6) |
| 4 | ಕಲಘಟಗಿ | 27 | 2(1) | 1(1) | 7(4) | 2(1) | 15(8) |
| 5 | ಕುಂದಗೋಳ್ | 22 | 2(1) | 2(1) | 6(3) | 1(1) | 11(6) |
| **ಗದಗ** | | | | | | | |
| 1 | ನರಗುಂದ | 12 | 1(1) | 1(1) | 3(2) | 1 | 6(3) |
| 2 | ರೋಣ | 30 | 4(2) | 2(1) | 7(4) | 2(1) | 15(8) |
| 3 | ಗದಗ | 25 | 4(2) | 2(1) | 5(2) | 1(1) | 13(7) |
| 4 | ಶಿರಹಟ್ಟಿ | 24 | 4(2) | 2(1) | 5(2) | 1(1) | 12(6) |
| 5 | ಮುಂಡರಗಿ | 15 | 3(2) | 1(1) | 2(2) | 1 | 8(4) |

| ಕ್ರ. ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಹಾವೇರಿ | | | | | | | |
| 1 | ಶಿಗ್ಗಾಂವ | 25 | 2(1) | 2(1) | 6(3) | 2(1) | 13(7) |
| 2 | ಸವಣೂರು | 20 | 3(2) | 2(1) | 4(2) | 1(1) | 10(5) |
| 3 | ಹಾನಗಲ್ | 40 | 5(3) | 3(2) | 10(5) | 2(1) | 20(10) |
| 4 | ಹಾವೇರಿ | 31 | 4(2) | 3(2) | 6(3) | 2(1) | 16(8) |
| 5 | ಬ್ಯಾಡಗಿ | 20 | 2(1) | 2(1) | 5(2) | 1(1) | 10(5) |
| 6 | ಹಿರೇಕೆರೂರು | 37 | 4(2) | 3(2) | 9(5) | 2(1) | 19(10) |
| 7 | ರಾಣೆಬೆನ್ನೂರು | 35 | 5(3) | 4(2) | 6(3) | 2(1) | 18(9) |
| ಉತ್ತರ ಕನ್ನಡ | | | | | | | |
| 1 | ಕಾರವಾರ | 17 | - | 1(1) | 5(2) | 1(1) | 10(5) |
| 2 | ಜೋಯಿಡಾ | 15 | - | - | 4(2) | 1(1) | 10(5) |
| 3 | ಹಳಿಯಾಳ | 20 | 1(1) | - | 6(3) | 1(1) | 12(6) |
| 4 | ಯಲ್ಲಾಪುರ | 14 | - | - | 4(2) | 1(1) | 9(5) |
| 5 | ಮುಂಡಗೋಡ | 13 | 2(1) | 1(1) | 2(2) | 1 | 7(4) |
| 6 | ಸಿರಸಿ | 27 | 2(1) | - | 7(4) | 2(1) | 16(8) |
| 7 | ಅಂಕೋಲ | 19 | 1(1) | - | 5(2) | 1(1) | 12(6) |
| 8 | ಕುಮಟಾ | 21 | 1(1) | - | 6(3) | 1(1) | 13(7) |
| 9 | ಸಿದ್ದಾಪುರ | 21 | 1(1) | - | 6(3) | 1(1) | 13(7) |
| 10 | ಹೊನ್ನಾವರ | 24 | 1(1) | - | 6(3) | 2(1) | 15(8) |
| 11 | ಭಟ್ಕಳ | 16 | 2(1) | 1(1) | 4(2) | 1(1) | 8(4) |
| ಬಳ್ಳಾರಿ | | | | | | | |
| 1 | ಹಡಗಲಿ | 24 | 6(3) | 2(1) | 3(2) | 1 | 12(6) |
| 2 | ಹಗರಿಬೊಮ್ಮನಹಳ್ಳಿ | 22 | 5(3) | 3(2) | 2(2) | 1 | 11(6) |
| 3 | ಹೊಸಪೇಟೆ | 23 | 6(3) | 5(3) | - | - | 12(6) |
| 4 | ಶಿರಗುಪ್ಪ | 26 | 5(3) | 5(3) | 2(2) | 1 | 13(7) |
| 5 | ಬಳ್ಳಾರಿ | 40 | 9(5) | 12(6) | - | - | 19(10) |
| 6 | ಸಂಡೂರು | 21 | 5(3) | 8(4) | - | - | 8(4) |
| 7 | ಕೂಡ್ಲಿಗಿ | 33 | 7(4) | 10(5) | - | - | 16(8) |
| ಬೀದರ್ | | | | | | | |
| 1 | ಬಸವಕಲ್ಯಾಣ | 36 | 8(4) | 7(4) | 2(2) | 1 | 18(9) |
| 2 | ಬಾಲ್ಕಿ | 35 | 8(4) | 3(2) | 5(2) | 1(1) | 18(9) |
| 3 | ಔರಾದ್ | 38 | 10(5) | 3(2) | 5(2) | 1(1) | 19(10) |
| 4 | ಬೀದರ್ | 33 | 7(4) | 6(3) | 2(2) | 1 | 17(9) |
| 5 | ಹುಮನಬಾದ್ | 33 | 8(4) | 7(4) | 1(1) | - | 17(9) |

| ಕ್ರ ಸಂ | ಜಿಲ್ಲೆ / ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಅ.ಜಾ | ಅ.ಪಂ | ಹಿಂ. 'ಅ' ವರ್ಗ | ಹಿಂ. 'ಬ' ವರ್ಗ | ಸಾಮಾನ್ಯ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| **ಗುಲ್ಬರ್ಗಾ** | | | | | | | |
| 1 | ಆಳಂದ | 39 | 10(5) | 1(1) | 6(3) | 2(1) | 20(10) |
| 2 | ಅಫಜಲ್‌ಪುರ | 22 | 5(3) | 1(1) | 4(2) | 1(1) | 11(6) |
| 3 | ಗುಲ್ಬರ್ಗಾ | 36 | 12(6) | 1(1) | 4(2) | 1(1) | 18(9) |
| 4 | ಚಿಂಚೋಳಿ | 32 | 11(6) | 1(1) | 3(2) | 1 | 16(8) |
| 5 | ಸೇಡಂ | 23 | 7(4) | 1(1) | 2(2) | 1 | 12(6) |
| 6 | ಚಿತ್ತಾಪುರ | 35 | 11(6) | 1(1) | 4(2) | 1(1) | 18(9) |
| 7 | ಜೇವರ್ಗಿ | 33 | 7(4) | 2(1) | 6(3) | 1(1) | 17(9) |
| **ಯಾದಗಿರ್** | | | | | | | |
| 1 | ಶೋರಾಪುರ | 42 | 9(5) | 9(5) | 2(2) | 1 | 21(11) |
| 2 | ಶಹಾಪುರ | 36 | 10(5) | 4(2) | 3(2) | 1 | 18(9) |
| 3 | ಯಾದಗಿರ್ | 39 | 10(5) | 3(2) | 5(2) | 1(1) | 20(10) |
| **ರಾಯಚೂರು** | | | | | | | |
| 1 | ಲಿಂಗಸಗೂರು | 35 | 9(5) | 8(4) | - | - | 18(9) |
| 2 | ದೇವದುರ್ಗ | 28 | 7(4) | 11(6) | - | - | 10(5) |
| 3 | ರಾಯಚೂರು | 31 | 7(4) | 7(4) | 1(1) | - | 16(8) |
| 4 | ಮಾನ್ವಿ | 36 | 9(5) | 12(6) | - | - | 15(8) |
| 5 | ಸಿಂಧನೂರು | 34 | 9(5) | 7(4) | 1(1) | - | 17(9) |
| **ಕೊಪ್ಪಳ** | | | | | | | |
| 1 | ಯಲಬುರ್ಗಾ | 33 | 5(3) | 4(2) | 6(3) | 1(1) | 17(9) |
| 2 | ಕುಷ್ಟಗಿ | 28 | 5(3) | 5(3) | 3(2) | 1 | 14(7) |
| 3 | ಗಂಗಾವತಿ | 38 | 9(5) | 8(4) | 2(1) | - | 19(10) |
| 4 | ಕೊಪ್ಪಳ | 35 | 7(4) | 4(2) | 5(2) | 1(1) | 18(9) |

(ಆವರಣದಲ್ಲಿ ಸೂಚಿಸಿರುವ ಸಂಖ್ಯೆಯು ಮಹಿಳೆಯರಿಗೆ ಮೀಸಲಿರಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯನ್ನು ಸೂಚಿಸುತ್ತದೆ)

ವೀರಭದ್ರಯ್ಯ
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (350 ಪ್ರತಿಗಳು)